# 'ದೇಸಿ ಬಾಯ್ಸ್' ನಡುವೆ ಸಮರ?



ಸ್ಟಾರ್ ಕಲಾವಿದರ ನಡುವಿನ ಶೀತಲ ಸಮರ, ವೈಷಮ್ಯ ಹೊಸತಲ್ಲ. ಹೊಟ್ಟೆಕಿಚ್ಚು ಉತ್ತಮ ಸಿನಿಮಾಗಳನ್ನು ನೀಡಲು ಕಲಾವಿದರ ನಡುವೆ ಸ್ಪರ್ಧೆ ಹುಟ್ಟಿಸುತ್ತದೆ ಎಂಬ ಮಾತಿದೆ. ಅದನ್ನು ಒಪ್ಪಿಕೊಳ್ಳುವುದೋ ಬಿಡುವುದೋ ಬೇರೆಯ ಮಾತು. ಈ ಮಾತಿನ ಪ್ರಸ್ತಾಪ ಏಕೆಂದರೆ ಅಕ್ಷಯ್ ಕುಮಾರ್ ಮತ್ತು ಜಾನ್ ಅಬ್ರಹಾಂ ನಡುವೆ ಜಗಳ ನಡೆದಿದೆ, ಒಬ್ಬರ ಮುಖವನ್ನು ಕಂಡರೆ ಮತ್ತೊಬ್ಬರಿಗಾಗದು ಎಂಬ ಸುದ್ದಿ ಕೇಳಿಬರುತ್ತಿದೆ. ಈ ಸುದ್ದಿ ಹರಡಲು ಕಾರಣ ಹಳೆಯ ಯಶಸ್ವಿ ಚಿತ್ರಗಳ ಮುಂದುವರಿದ ಆವೃತ್ತಿಗಳಲ್ಲಿ ಅಕ್ಷಯ್ ಕುಮಾರ್ ಸ್ಥಾನವನ್ನು ಜಾನ್ ಅಬ್ರಹಾಂ ಅಲಂಕರಿಸಿರುವುದು. 'ಹೌಸ್‌ಫುಲ್ 2', 'ದೇಸಿ ಬಾಯ್ಸ್' ಮತ್ತು 'ಗರಂ ಮಸಾಲ' ಚಿತ್ರಗಳಲ್ಲಿ ಅಕ್ಷಯ್ ಹಾಗೂ ಜಾನ್ ತೆರೆ ಹಂಚಿಕೊಂಡಿದ್ದರು. ಅಕ್ಷಯ್ 'ಹೇರಾ ಫೇರಿ' ಮತ್ತು 'ವೆಲ್‌ಕಮ್'ನಂತಹ ಬಹುತಾರಾಗಣದ ಯಶಸ್ವಿ ಹಾಸ್ಯ ಚಿತ್ರಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದವರು. ಈಗ ಈ ಚಿತ್ರಗಳ ಮುಂದುವರಿದ ಆವೃತ್ತಿಗಳಲ್ಲಿ ಅಕ್ಷಯ್ ಬದಲು ಜಾನ್ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ. 'ವೆಲ್‌ಕಮ್ ಬ್ಯಾಕ್' ಮತ್ತು 'ಹೇರಾ ಫೇರಿ 3' ಚಿತ್ರಗಳು ಜಾನ್ ಪಾಲಾಗಿವೆ. ಇದು ಇಬ್ಬರ ಗೆಳೆತನ ಹಳಸಲು ಕಾರಣವಾಗಿದೆ ಎಂಬ ಗಾಳಿ ಸುದ್ದಿ ಹುಟ್ಟಲು ಕಾರಣ. ಅದು ಗಾಳಿ ಸುದ್ದಿಯೇ ವಿನಾ ಸತ್ಯವಲ್ಲ ಎಂದಿದ್ದಾರೆ ಜಾನ್ ಅಬ್ರಹಾಂ. 'ವೆಲ್‌ಕಮ್ ಬ್ಯಾಕ್'ಗೆ ಸಹಿ ಹಾಕಿದ ತಕ್ಷಣ ಮೊದಲು ವಿಚಾರವನ್ನು ನಾನು ಹಂಚಿಕೊಂಡಿದ್ದು ಅಕ್ಷಯ್ ಕುಮಾರ್ ಜತೆ. ಅಕ್ಷಯ್ ಅದು ಒಳ್ಳೆಯ ಸಿನಿಮಾ ಎಂದು ಸಂತಸ ವ್ಯಕ್ತಪಡಿಸಿದರು' ಎಂಬುದಾಗಿ ಜಾನ್ ಹೇಳಿಕೊಂಡಿದ್ದಾರೆ. 'ಹೇರಾ ಫೇರಿ'ಯನ್ನೂ ಒಪ್ಪಿಕೊಂಡಾಗ ಅವರಿಗೆ ಕರೆ ಮಾಡಿದ್ದೆ. ಅವರು ನನ್ನ ಗೆಳೆಯ. ಈ ಹಿಂದೆ ಒಟ್ಟಾಗಿ ನಟಿಸಿದ್ದೇವೆ. ನಾವಿಬ್ಬರೂ ಒಳ್ಳೆಯ ಸ್ನೇಹಿತರು. ಇಬ್ಬರ ನಡುವೆ ವೈರತ್ವ ಕಿಂಚಿತ್ತೂ ಇಲ್ಲ' ಎಂದಿದ್ದಾರೆ ಅವರು. 'ವೆಲ್‌ಕಮ್' ಮತ್ತು 'ಹೇರಾ ಫೇರಿ' ಚಿತ್ರಗಳ ಮೊದಲ ಆವೃತ್ತಿಗಳನ್ನು ತುಂಬಾ ಮೆಚ್ಚಿಕೊಂಡಿದ್ದಾಗಿ ಅವರು ಹೇಳಿದ್ದಾರೆ. 'ಮದ್ರಾಸ್ ಕೆಫೆ' ಬಳಿಕ ದೀರ್ಘ ವಿರಾಮ ತೆಗೆದುಕೊಂಡಿದ್ದ ಜಾನ್ ಎರಡು ಹಾಸ್ಯ ಚಿತ್ರಗಳ ಮೂಲಕ ಮತ್ತೆ ಬಣ್ಣ ಹಚ್ಚುತ್ತಿದ್ದಾರೆ. ಸದ್ಯಕ್ಕೆ ಜಾನ್ ಏನೋ ತಮ್ಮ ನಡುವೆ ವಿರಸವಿಲ್ಲ ಎಂದು ಘೋಷಿಸಿದ್ದಾರೆ. ಆದರೆ ತಮ್ಮ ಸ್ಥಾನವನ್ನು ಆಕ್ರಮಿಸಿಕೊಂಡ ಜಾನ್ ಮೇಲೆ ಅಕ್ಷಯ್ ಅಭಿಪ್ರಾಯ ಏನಿದೆ ಎಂದು ಇನ್ನೂ ತಿಳಿದಿಲ್ಲ. ಅಕ್ಷಯ್ ಆಕ್ರೋಶ, ಸೇಡುಗಳೇನಿದ್ದರೂ ಸಿನಿಮಾಗಳಲ್ಲಿ, ತೆರೆ ಹಿಂದೆ ಅವರದು ಸೌಮ್ಯ ವ್ಯಕ್ತಿತ್ವ. ಇಬ್ಬರ ಸ್ನೇಹಕ್ಕೆ ಕುಂದೇನೂ ಇಲ್ಲ ಎನ್ನುತ್ತಿದೆ ಆಪ್ತರ ವಲಯ.



# ಮಹತ್ವಾಕಾಂಕ್ಷಿ ಪಲ್ಲವಿ!

ಚಿತ್ರರಂಗದಲ್ಲಿ ಎಲ್ಲರೂ ಗುರುತಿಸುವಂತಹ ನಟಿಯಾಗಿ ಬೆಳೆಯಬೇಕು ಎನ್ನುವುದು ಈಕೆಯ ಹೆಬ್ಬಯಕೆ. ಆದರೆ 'ಬೇಷರಮ್' ಚಿತ್ರದ ಸೋಲು ಈ ನವ ನಟಿಗೆ ತುಸು ಹಿನ್ನಡೆಯುಂಟು ಮಾಡಿತ್ತು. ಹಾಗೆಂದು ಈಕೆ ಎದೆಗುಂದಿಲ್ಲ. ತಮ್ಮ ಹೊಸ ಚಿತ್ರವನ್ನು ಹೊಸ ಪ್ರಾರಂಭ ಎಂದೇ ಪರಿಗಣಿಸಿರುವ ಈ ನಟಿಯ ಹೆಸರು ಪಲ್ಲವಿ ಶಾರ್ದಾ. ತಾನೊಬ್ಬ ಬಹುಮುಖಿ, ಸಾರ್ವಕಾಲಿಕ ನಟಿ ಎನ್ನುವ ನಂಬಿಕೆ ಪಲ್ಲವಿ ಅವರದು. ಅವರಲ್ಲಿ ಈ ಆತ್ಮವಿಶ್ವಾಸ ಹುಟ್ಟಿಸಿರುವುದು 'ಹವಾಯಿಜಾದಾ' ಚಿತ್ರ. ಜನವರಿ 30ಕ್ಕೆ ಬಿಡುಗಡೆಯಾಗಲು ಸಿದ್ಧವಾಗಿರುವ ಈ ಚಿತ್ರದ ಬಗ್ಗೆ ಸಾಕಷ್ಟು ನಿರೀಕ್ಷೆಯಿರಿಸಿಕೊಂಡಿದ್ದಾರೆ ಅವರು. 'ಈ ಬಗೆಯ ಪಾತ್ರಗಳನ್ನೂ ನಿರ್ವಹಿಸಬಲ್ಲೆ ಎಂಬುದನ್ನು ಸಾಬೀತುಪಡಿಸಲು ಮತ್ತೊಂದು ಅವಕಾಶ ಪಡೆದುಕೊಂಡಿದ್ದೇನೆ' ಎಂದು ಅವರು 'ಹವಾಯಿಜಾದಾ' ಕುರಿತು ಸಂತಸದಿಂದ ಹೇಳಿಕೊಳ್ಳುತ್ತಾರೆ. ಜನರು ತಮ್ಮ ನಟನೆಯನ್ನು ಮೆಚ್ಚಿಕೊಳ್ಳುತ್ತಾರೆ ಎಂಬ ವಿಶ್ವಾಸ ಅವರಲ್ಲಿ ಮೂಡಿದೆ. 'ಪಲ್ಲವಿ ಉತ್ತಮ ಪ್ರತಿಭಾವಂತೆ. ಅವರು ಶಾಸ್ತ್ರೀಯ ನೃತ್ಯದಲ್ಲಿ ತರಬೇತಿ ಪಡೆದವರು. ನೃತ್ಯಪಟುವೇ ಚಿತ್ರಕ್ಕೆ ಬೇಕು ಎಂದು ನಿರ್ದೇಶಕ ವಿಭು ಪುರಿ ಹುಡುಕಾಟದಲ್ಲಿದ್ದಾಗ ಆ ಸ್ಥಾನಕ್ಕೆ ಹೇಳಿ ಮಾಡಿಸಿದಂತಹ ಪಲ್ಲವಿ ಸಿಕ್ಕಿದ್ದಾರೆ. ನಾನು ಕೆಲಸ ಮಾಡಿದ ನಟಿಯರಲ್ಲಿ ಅತ್ಯಂತ ಚುರುಕಿನ ನಟಿಯರಲ್ಲಿ ಅವರೂ ಒಬ್ಬರು' ಎಂದು ಸಹನಟಿಯ ಗುಣಗಾನ ಮಾಡಿದ್ದಾರೆ ಆಯುಷ್ಮಾನ್ ಖುರಾನಾ. ಆಯುಷ್ಮಾನ್ ಖುರಾನಾ, ಮಿಥುನ್ ಚಕ್ರವರ್ತಿ ಮತ್ತು ಪಲ್ಲವಿ ಅವರ ಪಾತ್ರದ ಸುತ್ತಲೂ ಈ ಚಿತ್ರದ ಕಥೆ ಸಾಗುತ್ತದೆ. ಅಂದಹಾಗೆ, ಇದು ಭಾರತದ ಮೊಟ್ಟ ಮೊದಲ ಮಾನವರಹಿತ ವಿಮಾನ ತಯಾರಿಸಿದ ಕೀರ್ತಿಯ ವಿಜ್ಞಾನಿ ಶಿವಕರ್ ಬಾಪೂಜಿ ತಲ್ಪಾಡೆ ಅವರ ಬದುಕನ್ನು ಆಧರಿಸಿದ ಚಿತ್ರ. ವಿಶಿಷ್ಟ ಕಥೆಯ ಈ ಚಿತ್ರ ಎಲ್ಲಾ ವರ್ಗದ ಪ್ರೇಕ್ಷಕರನ್ನೂ ಸೆಳೆಯಲಿದೆ ಎಂಬ ಭರವಸೆ ಚಿತ್ರತಂಡದ್ದು. ನಿರ್ದೇಶಕರಿಗಿಂತಲೂ ಸಿನಿಮಾದ ಯಶಸ್ಸು ಮತ್ತು ತಮ್ಮ ನಟನೆ ಬಗ್ಗೆ ಹೆಚ್ಚು ವಿಶ್ವಾಸದಿಂದ ಮಾತನಾಡುವ ಪಲ್ಲವಿ, ಈಗಿನ ಮುಂಚೂಣಿ ನಾಯಕಿಯರಿಗೆ ಸರಿಸಮನಾಗಿ ಬೆಳೆಯುವ ಛಾತಿ ಹೊಂದಿದ್ದಾರೆ ಎನ್ನಲಾಗುತ್ತಿದೆ.

■ ಅಮಿ